Sri R.V. Deshpande : The Cor-operation Minister himself said...
(Interruptions)

ಅಧ್ಯಕ್ಷರು : ಸಹಕಾರ ಸಚಿವರು ಬಂದು ನಾವೆ ಏನು ಹೇಳುತ್ತಾರೆ ನೋಡೋಣ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ವಿರೋಧ ಪಕ್ಷದ ಸದಸ್ಯರಿಗೆ ತುಂಬಾ ಅಭಿನಂದನೆಗಳನ್ನು ಸಲ್ಲಿಸಬೇಕು. ಏಕೆಂದರೆ, ಅವರಿಗೆ ನಮ್ಮ ಸಹಕಾರಿ ಸಚಿವರ ವಿಚಾರದಲ್ಲಿ ಸಂಪೂರ್ಣವಾದ ವಿಶ್ವಾಸ ಇದೆ, ನಂಬಿಕೆ ಇದೆ. ಆ ವಿಶ್ವಾಸ, ನಂಬಿಕೆಗೆ ವಿರುದ್ಧವಾಗಿ ಸಹಕಾರ ಸಚಿವರು ಹೋಗುವುದಕ್ಕೆ ಸಾಧ್ಯವಿದೆಯೇ ಹೇಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ಪತ್ರಿಕೆಗಳಲ್ಲಿ ಬಂದಿದೆ.

(ಗೊಂದಲ)

12.30 ಪಿ.ಎಂ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮೊಯಿಲಿಯವರು ಕಾನೂನಿಗೆ ವಿರುದ್ಧವಾಗಿ ಏನು ಮಾಡುವುದಿಲ್ಲವೆಂದು ಹೇಳಿದರು. ಮಾಡುವುದಿಲ್ಲ ಬೇಸಿಕ್ ಆಗಿ ನಿಮ್ಮ ಹತ್ತಿರ ಕಾನೂನಿಗೆ ಬೆಲೆಯೇ ಇಲ್ಲ, ಪ್ರಜಾತಂತ್ರಕ್ಕೆ ಬೆಲೆಯಿಲ್ಲ. ನಾಳೆ ಸಾಯಂಕಾಲ ಮಾತನಾಡುವಾಗ ಅದನ್ನು ಹೇಳುತ್ತೇವೆ. ಇದರ ಮೇಲೆ ನೀವು ನಾಮಿನೇಷನ್ ಮಾಡಿಬಿಡುತ್ತೇವೆಂದರೆ ಮಾಡಿ. ಯಾರು ಬೇಡವೆಂದು ಹೇಳುತ್ತಾರೆ. ನೀವು 180 ಜನ ಇದ್ದೀರಿ. ನಾವು 35 ಜನ ಇದ್ದೇವೆ. ಜಿಲ್ಲಾಪರಿಷತ್ ಬಿಲ್ಲನ್ನು ತಂದು ಹಣೆಬರಹ ಏನಾಗಿದೆ ಎನ್ನುವುದು ನಿಮಗೆ ಗೊತ್ತಿದೆ.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ....

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಹಿಂದಿನ ಸರ್ಕಾರ ಇದ್ದಾಗ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಗೆ ನಾಮಿನೇಷನ್ ಆಗಿರುತ್ತದೆ.

ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಜಾಗವನ್ನು ಅಕ್ರಮಣ ಮಾಡಿ ಅಂಗಡಿಗಳನ್ನು ಕಟ್ಟುತ್ತಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಮ್ಮ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಬೆಂಗಳೂರು ನಗರದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ .....

ಅಧ್ಯಕ್ಷರು : ನನಗೆ ನಿಮ್ಮದು ನೋಟೀಸ್ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನದು ಒಂದು ಸಬ್‌ಮಿಷನ್‌ಗೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಸಬ್‌ಮಿಷನ್‌ಗೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಪ್ರತಿಯೊಂದು ಅಂಗಡಿಯಿಂದಲೂ ದುಡ್ಡನ್ನು

ತೆಗೆದುಕೊಂಡಿರುತ್ತಾರೆ. ಬಹಳ ಪ್ರಾಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಅಧ್ಯಕ್ಷರಾ : ಬಹಳ ಪ್ರಮುಖವಾದ ವಿಚಾರವೆನ್ನುವುದು ನನಗೂ ಗೊತ್ತು. ಆ ವಿಚಾರದ ಪ್ರಾಮುಖ್ಯತೆಯನ್ನು ಗ್ರಹಿಸಿಕೊಂಡೇ ನಾನು ನಾಳೆ ಕಾಲಿಂಗ್ ಅಟೆನ್‌ಷನ್‌ಗೆ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥದ್ದು ಇಷ್ಟೇ. ಈ ನಿವೇಶನಗಳನ್ನು ಕೊಡುತ್ತಿರುವುದು ರಾಜ್ಯದ ಪ್ರಮುಖವಾದ ಪತ್ರಿಕೆಗಳಲ್ಲಿ ಬಂದಿದೆ. ನಮ್ಮ ನಗರದ ಇತಿಹಾಸ ಪ್ರಸಿದ್ಧವಾಗಿರತಕ್ಕಂಥ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಸಿಲ್ವರ್‌ಜ್ಯುಬಿಲಿ ಪಾರ್ಕ್‌ನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯವರು ಜಾಗವನ್ನು ಆಕ್ರಮಣ ಮಾಡಿಕೊಂಡು ಸುಮಾರು 300 ಅಂಗಡಿಗಳನ್ನು ರಾತ್ರೋ ರಾತ್ರಿ ದರೋಡೆಕೋರರು, ಕಳ್ಳಕಾಕರು ಅಂಗಡಿಗಳನ್ನು ಕಟ್ಟುತ್ತಿದ್ದಾರೆ ಎನ್ನುವುದು. ಪತ್ರಿಕೆಗಳಲ್ಲಿ ಬಂದಮೇಲೆ ಇವತ್ತು ಬೆಳಿಗ್ಗೆ 7-00ಗಂಟೆಗೆ ನಾನೇ ಸ್ವತಃ ನೋಡಿಕೊಂಡು ಬಂದಿರುತ್ತೇನೆ. ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಅಷ್ಟೇ ಅಲ್ಲಾ ಸುಲ್ತಾನ್‌ಮೊಹಲ್ಲದ ಉರ್ದು ಪಾಠ ಶಾಲೆಯ ಆವರಣದಲ್ಲಿ ಗಣೇಶನ ದೇವಸ್ಥಾನದ ಆವರಣದಲ್ಲಿ ಈಗಾಗಲೇ ಪರ್ಮನೆಂಟ್ ಸ್ಟ್ರಕ್ಚರ್ಸ್ ಕಟ್ಟಿದ್ದಾರೆ. ಮಹಾನಗರಪಾಲಿಕೆಯ ಒಬ್ಬ ಅಧಿಕಾರಿ ನಾವು 20 ಅಂಗಡಿಗಳಿಗೆ ಮಾತ್ರ ಕಟ್ಟತಕ್ಕದ್ದು ಎಂದು ಹೇಳಿದ್ದಾರೆ. ವಸ್ತು ಸ್ಥಿತಿಯಲ್ಲಿ ಈಗ ಅಲ್ಲಿ 150ಕ್ಕೂ ಹೆಚ್ಚು ಅಂಗಡಿಗಳನ್ನು ಕಟ್ಟಿದ್ದಾರೆ. ಷಟರ್ಸ್‌ಗಳನ್ನು ಹಾಕಿದ್ದಾರೆ. ಗೋಡೆಗಳನ್ನು ಕಟ್ಟಿದ್ದಾರೆ. ಒಂದು ಅಂಗಡಿಗೆ 20 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಪಗಡಿ ಹಣವನ್ನು ಯಾರು ಕೊಡುತ್ತಾರೆ. ಅವರಿಗೆ ಅಲಾಟ್ ಮಾಡತಕ್ಕಂಥ ಕೆಲಸವನ್ನು ಶುಕ್ರವಾರ, ಶನಿವಾರ, ಭಾನುವಾರ, ಈ ಅಧಿವೇಶನ ನಡೆಯತಕ್ಕಂಥ ಮತ್ತು ಸರ್ಕಾರಿ ರಜೆ ಇರತಕ್ಕಂಥ ದಿನಗಳಲ್ಲಿ ಮಾಡಿದ್ದಾರೆ. ನಾನು ಬೆಳಿಗ್ಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಉಳಿದ ವಿಚಾರಗಳನ್ನು ನಾಳೆ ನಾನು ಪ್ರಸ್ತಾಪ ಮಾಡುತ್ತೇನೆ. ಇವತ್ತು ಕೆ.ಆರ್.ಮಾರ್ಕೆಟ್ ಸುತ್ತಮುತ್ತಲೂ ಇರತಕ್ಕಂಥ ಪ್ರತಿಯೊಂದು ಜಾಗಕ್ಕೂ ಒಂದೊಂದು ಲಕ್ಷ ರೂಪಾಯಿ ಆಗುತ್ತದೆ. 300 ಅಂಗಡಿಗಳೆಂದರೆ ಮೂರು ಕೋಟಿ ರೂಪಾಯಿಗಳ ದರೋಡೆ, ದುರ್ಮವಹಾರ ಇವತ್ತು ನಡೆಯುತ್ತಿದೆ. ಸರ್ಕಾರದ ಬಗ್ಗೆ ಬಹಳ ಲಘುವಾಗಿ ಮಾತನಾಡುತ್ತಿದ್ದಾರೆ. ನೀವು ಯಾರಿಗೆ ಅಲಾಟ್ ಮಾಡುತ್ತಿದ್ದೀರಿ, ಏನು ಮಾಡುತ್ತಿದ್ದೀರಿ. ಸರ್ಕಾರವೇ ಕಳ್ಳತನದಲ್ಲಿ ಏತಕ್ಕೆ ಕಟ್ಟಬೇಕು. ಬಹಿರಂಗವಾಗಿ ಕಟ್ಟಬಹುದಾಗಿತ್ತು. ಮಾನ್ಯ ನಗರಾಭಿವೃದ್ಧಿ ಸಚಿವರು ಸದನದಲ್ಲಿದ್ದಾರೆ. ರಾತ್ರೋ ರಾತ್ರಿ ಏತಕ್ಕೆ ಕಟ್ಟಡಗಳನ್ನು ಕಟ್ಟುವುದಕ್ಕೆ ಹೊರಟಿದ್ದೀರಿ? ಬೆಂಗಳೂರು ನಗರದ ಪ್ರತಿಷ್ಠಿತ ಪ್ರದೇಶದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಆಸ್ತಿ ಅನ್ಯಾಯವಾಗಿ ಪರಕೀಯರಿಗೆ ಹೋಗುತ್ತಿದೆ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಇವತ್ತು ಸಂಜೆಯೊಳಗೆ ಕಟ್ಟಡ ನಿರ್ಮಾಣ ಕಾರ್ಯವನ್ನು ನಿಲ್ಲಿಸಬೇಕೆಂದು ಒತ್ತಾಯಿಸುತ್ತೇನೆ. ನಾಳೆ ಗಮನ ಸೆಳೆಯುವ ಸೂಚನೆ ಬಂದಾಗ ವಿವರವಾಗಿ ಪ್ರಸ್ತಾಪಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅಕ್ರಮವಾಗ ಬೆಂಗಳೂರಿನ ಯಾವ ಸ್ಥಳದಲ್ಲೂ ಕಟ್ಟಡ ಕಟ್ಟಬಾರದೆಂದು ನಗರಸಭೆಯ ನಿಯಮ ಇದೆ. ಈ ನಿಯಮವನ್ನು ಉಲ್ಲಪಘನೆ ಮಾಡಿ ಉದ್ಯಾನವನವನ್ನು ಹಾಳು ಮಾಡುತ್ತಿದ್ದಾರೆ. ನಾಳೆ ದಿವಸ ಕಬ್ಬನ್ ಪಾರ್ಕಿಗೂ ಬರುತ್ತಾರೆ. ಇದು ದೊಡ್ಡ ದರೋಡೆ. ಇದರಲ್ಲಿ ಹಿಂದೆ ಭಾರಿ ಭಾರಿ ಕುಳಗಳು ಇವೆ. ಇದನ್ನು ಸಮಗ್ರವಾಗಿ ತಪ್ಪಿಸುವುದಕ್ಕೆ ಸರ್ಕಾರ ಕೂಡಲೇ ವ್ಯವಸ್ಥೆ ಮಾಡಬೇಕು. ವ್ಯವಸ್ಥೆ ಮಾಡಲಿಲ್ಲವೆಂದರೆ ಈ ಸದನದಲ್ಲಿ ನಾವು ಧರಣಿ ಮಾಡುತ್ತೇವೆ. ತಮಗೆ ಅಗೌರವ ಮಾಡಬೇಕೆಂದು ಇಲ್ಲ, ಅಷ್ಟೊಂದು

ಮನೆಗಳು ಹೇಗೆ ಏಳುತ್ತವೆ ಎನ್ನುವುದನ್ನು ನೋಡಿ. ದಿಢೀರನೆ ಒಂದೇ ರಾತ್ರಿಯಲ್ಲಿ 300 ಮನೆಗಳು ಎದ್ದಿವೆ. ಕೃಷ್ಣರಾಜ ಮಾರ್ಕೆಟ್ ಸುತ್ತಮುತ್ತ ವಿಕ್ಟೋರಿಯಾ ಆಸ್ಪತ್ರೆಯ ಪಕ್ಕ ಮತ್ತೊಂದು ಕಡೆ ಅನ್ಯಾಯ, ಅಕ್ರಮ ನಡೆಯುತ್ತಿದೆ. ಇದಕ್ಕೆ ಲಗಾಮು ಹಾಕಬೇಕಾಗಿದೆ. ಇದರ ಬಗ್ಗೆ ಸರ್ಕಾರ ಕೂಡಲೇ ಹೇಳಿಕೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಬಗ್ಗೆ ಚರ್ಚೆಯಾಗಿ ನಾಳೆ ತೀರ್ಮಾನಕ್ಕೆ ಬರೋಣ. ಈಗ ಮಾತ್ರ ಕಟ್ಟಡ ಕಟ್ಟುವುದಕ್ಕೆ ತಕ್ಷಣ ನಿಲ್ಲಿಸಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಈ ಜನರಿಗೆ ಅನುಕೂಲ ಮಾಡಬೇಕೆಂಬ ಉದ್ದೇಶದಿಂದ ಕೆ.ಆರ್. ಮಾರ್ಕೆಟ್‌ನಲ್ಲಿ ಕಟ್ಟಡದ ಕೆಲಸ ನಡೆಯುತ್ತಿದೆ. ನಮ್ಮ ಸರ್ಕಾರ ಇದ್ದಾಗ ಆ ಕೆಲಸ ನಡೆದು ಈಗ ಫಸ್ಟ್ ಫ್ಲೋರ್ ಮುಗಿದಿದೆ. ಇವತ್ತು ಕಾರ್ಪೋರೇಷನ್ ಕಮಿಷನರ್ ಟೆಂಪೊರರಿ ಅಕಾಮಡೇಷನ್ ಮಾಡುತ್ತೇವೆಂದು ಹೇಳುತ್ತಾರೆ. ಇವತ್ತಿನ ದಿವಸ ಈ ರೀತಿ ಆಗುತ್ತಿರುವುದನ್ನು ಕೂಡಲೇ ರದ್ದು ಪಡಿಸಬೇಕು. ಈ ಬಗ್ಗೆ ನಮಗೆ ಸರ್ಕಾರದಿಂದ ಭರವಸೆ ಬೇಕು.

ಶ್ರೀ ವಾಟಾಳ್ ನಾಗರಾಜ್ : ಒಂದು ದಿನ ನಿಂತರೆ ಸಾಕು, ಕೋರ್ಟಿಗೆ ಹೋಗಿ ವ್ಯವಸ್ಥೆ ಮಾಡುತ್ತಾರೆ.

ಶ್ರೀ ಸಿ. ಬೈರೇಗೌಡ : ಇದಕ್ಕೆ ವಿಶೇಷವಾದ ಕಾನೂನು ಇದೆ. ಪಾರ್ಕ್, ಸಿವಿಕ್ ಅಮೆನಿಟೀಸ್ ಜಾಗಗಳು ಏನಿವೆ, ಅದು ಕಾರ್ಪೋರೇಷನ್ ಏರಿಯ ಇರಬಹುದು, ಬಿಡಿಎ. ಏರಿಯ ಇರಬಹುದು. ಇವನ್ನು ಅಕ್ರಮ ಮಾಡಬಾರದೆಂದು ಕಾನೂನು ಇದೆ. ಇರತಕ್ಕ ಕಾನೂನನ್ನು ಉಲ್ಲಂಘಿಸಿ ಸರ್ಕಾರ ಕಾರ್ಪೋರೇಷನ್ ಕೆಲಸ ಮಾಡುವುದಾದರೆ ಈ ರಾಜ್ಯದಲ್ಲಿ ಕಾನೂನನ್ನು ರಕ್ಷಿಸುವವರು ಯಾರು? ಸದನದಲ್ಲಿ ಮಾಡಿರುವ ಕಾನೂನುಗಳಿಗೆ ಸರ್ಕಾರ ಗೌರವ ಕೊಡದಿದ್ದರೆ ಇನ್ನೆಲ್ಲಿ ಈ ಕಾನೂನಿಗೆ ಗೌರವ ಸಿಗುತ್ತದೆ? ನಾವು ಏತಕ್ಕೆ ಇಲ್ಲಿ ಕೂರಬೇಕು? ಕಾನೂನು ಮಾಡುವುದಾದರೂ ಏತಕ್ಕೆ? ಈ ಸಭೆ ಕಾನೂನುಗಳನ್ನು ಏತಕ್ಕೆ ಮಾಡಬೇಕು. ಕಾನೂನಿಗೆ ವಿರುದ್ಧವಾದ ಕೆಲಸವನ್ನು ಇವರೇ ಮಾಡುವುದಕ್ಕೆ ಹೊರಟರೆ ಆ ಕಾನೂನನ್ನು ರಕ್ಷಣೆ ಮಾಡುವವರು ಯಾರು ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ಎತ್ತಿದ್ದಾರೆ. ನಾನಾದರೂ ಭರವಸೆ ಕೊಡುತ್ತೇನೆ, ತಕ್ಷಣ ಯಾವುದೇ ಕನ್‌ಸ್ಟ್ರಕ್ಷನ್ ನಡೆಯುತ್ತಿದ್ದರೂ ಅದನ್ನು ನಿಲ್ಲಿಸುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಲಾಟ್‌ಮೆಂಟ್ ಕಾರ್ಯ ನಡೆಯುತ್ತಿದೆ

ಶ್ರೀ ಕೆ.ಜೆ. ಜಾರ್ಜ್ : ಈಗ ನನ್ನ ಹತ್ತಿರ ಯಾವುದೇ ಮಾಹಿತಿ ಇಲ್ಲ, ನಾಳೆ ಗಮನ ಸೆಳೆಯುವ ಸೂಚನೆ ಬಂದಾಗ ಉತ್ತರಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೆ, ಕರ್ನಾಟಕ - ಕೇರಳ ಗಡಿಯಲ್ಲಿರುವ ಮೂಲಹೊಳೆ ಅಭಯಾರಣ್ಯ ಸಮೀಪದ ಸುಮಾರು 500 ಎಕರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರ ಬಗ್ಗೆ ಅರಣ್ಯ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಸಿಗ್ನೇಚರ್ ಹಾಕಿದ್ದೆ.